# ಮನಸ್ಸಾಕ್ಷಿ ಮನಸಾಕ್ಷಿಯು ನಿಮಗೆ ಮಾರ್ಗದರ್ಶನ ನೀಡಬೇಕೆ?

"ನಿಮ್ಮ ಮನಸ್ಸಾಕ್ಷಿಯು ನಿಮಗೆ ಮಾರ್ಗದರ್ಶನ ನೀಡಲಿ" ಎಂಬ ಮಾತನ್ನು ನಾವು ಯಾವಾಗಲೂ ಕೇಳುವವರಾಗಿರುತ್ತೇವೆ. ಜನರು ತಮ್ಮ ಮನಸಾಕ್ಷಿಗನುಗುಣವಾಗಿ ಜೀವಿಸಿದರೆ, ಅವರಿಗೆ ಎಲ್ಲವೂ ಒಳಿತಾಗುತ್ತವೆ ಎಂದು ಸಕಲ ಧರ್ಮಗಳು ಹೇಳುತ್ತವೆ. ಈ ಪಾಠದಲ್ಲಿ ನಾವುಗಳು, ಕೇಳುವ ಪ್ರಶ್ನೆ ಏನಂದರೆ, "ಮನಸ್ಸಾಕ್ಷಿಯು ನಿಮಗೆ ಮಾರ್ಗದರ್ಶನ ನೀಡಬೇಕೆ?" ನನ್ನ ಉತ್ತರವು ಒಬ್ಬ ರಾಜಕೀಯ ವ್ಯಕ್ತಿಯ ಹೇಳಿಕೆಯಂತಿರುತ್ತದೆ. "ಹೌದು" ಮತ್ತು "ಇಲ್ಲ" ಎಂಬುದೇ ನನ್ನ ಉತ್ತರವಾಗಿರುತ್ತದೆ. ನಾನು ಹೇಳುವದನ್ನು ನೀವು ಗಮನಿಸುವಿರಿ ಎಂದು ನಿರೀಕ್ಷಿಸಿದ್ದೇನೆ. "ಇಲ್ಲ" ಎಂಬ ಉತ್ತರದಿಂದ ಆರಂಭಿಸೋಣ:

## "ಇಲ್ಲ" ಧಾರ್ಮಿಕ ವಿಚಾರಗಳಲ್ಲಿ, ಮನಸ್ಸಾಕ್ಷಿಯ ಮಾರ್ಗದರ್ಶನ ಮಾತ್ರ ಸಾಲದು

ಮನಸ್ಸಾಕ್ಷಿಯು, ಧಾರ್ಮಿಕ ವಿಚಾರಗಳಲ್ಲಿ ಮಾರ್ಗದರ್ಶನ ನೀಡಲಾರದು ಎಂದು ಸತ್ಯವೇದವು ಸ್ಪಷ್ಟಪಡಿಸುತ್ತದೆ. ಪೌಲನ ಉದಾಹರಣೆಯನ್ನು ಗಮನಿಸಿರಿ. ಪೌಲನು ಯಾವಾಗಲೂ ತನ್ನ ಮನಸ್ಸಾಕ್ಷಿಗನುಗುಣವಾಗಿ ಜೀವಿಸಿದನು. ಅವನು ಯೆಹೂದ್ಯ ಹಿರಿ ಸಭೆಯವರಿಗೆ, "ಸಹೋದರರೇ, ನಾನು ಈ ದಿನದವರೆಗೂ ಒಳ್ಳೇ ಮನಸ್ಸಾಕ್ಷಿಯಿಂದ ದೇವರ ಮುಂದೆ ನಡೆದುಕೊಂಡಿದ್ದೇನೆ ಅಂದನು" (ಅಪೊಸ್ತಲರ ಕೃತ್ಯಗಳು 23:1ಬಿ). ಅವನು ಅಗ್ರಿಪ್ಪನಿಗೆ, ನಾನು ನಜರೇತಿನ ಯೇಸುವಿನ ಹೆಸರಿಗೆ ವಿರುದ್ಧವಾಗಿ ಅನೇಕ ಕಾರ್ಯಗಳನ್ನು ನಡಿಸಬೇಕೆಂದು ನಾನು ಯೋಚಿಸಿಕೊಂಡಿದ್ದೆನು (26:9). ಅವನು ತಿಮೊಥಿಗೆ ಬರೆಯುವಾಗ, ದೇವರ ಬಗ್ಗೆ ಮಾತನಾಡಿ, "ಒಳ್ಳೇ ಮನಸ್ಸಾಕ್ಷಿಯುಳ್ಳವನಾಗಿ ನಡಕೊಂಡಿದ್ದೇನೆ" ಅಂದನು (2 ತಿಮೋಥೆ 1:3ಎ).

ಪೌಲನ ಮನಸ್ಸಾಕ್ಷಿಯು ಅವನ ಕ್ರಿಯೆಗಳನ್ನು ಯಾವಾಗಲೂ ಸಾಬೀತುಪಡಿಸುತ್ತಿದ್ದರೂ, ಅವನು ಕ್ರೈಸ್ತನಾಗುವ ಮೊದಲು ಮಾಡಿದ ಅನೇಕ ಕೃತ್ಯಗಳು ದೇವರಿಗೆ ಮೆಚ್ಚಿಗೆಯಾಗಿರಲಿಲ್ಲ - ಅದರಲ್ಲಿ ಯೇಸುವಿನ ನಿರಾಕರಣೆ, ಕ್ರೈಸ್ತರಿಗೆ ನೀಡಿದ ಹಿಂಸೆ, ಮುಗ್ದರನ್ನು ಕೊಂದದ್ದು ಕೂಡ ಒಳಗೊಂಡಿದೆ. ಇದನ್ನೇ ಅವನು ಅಗ್ರಿಪ್ಪನಿಗೆ ವಿವರಿಸಿದನು:

> ಯೆರೂಸಲೇಮಿನಲ್ಲಿ ಹಾಗೆಯೇ ನಡಿಸಿದೆನು. ಮಹಾಯಾಜಕರಿಂದ ಅಧಿಕಾರವನ್ನು ಪಡೆದು ದೇವ ಜನರಲ್ಲಿ ಅನೇಕರನ್ನು ಸೆರೆಮನೆಗಳಲ್ಲಿ ಇಡಿಸಿ ಅವರಿಗೆ ಮರಣದ ತೀರ್ಪಾದಾಗ ನನ್ನ ಸಮ್ಮತಿಯನ್ನು ಸೂಚಿಸಿದೆನು. ಎಲ್ಲಾ ಸಭಾಮದಿರಗಳಲ್ಲಿಯೂ ನಾನು ಅನೇಕಾವರ್ತಿ ಅವರನ್ನು ದಂಡಿಸಿ ಅವರಿಂದ ದೂಷಣೆಯ ಮಾತುಗಳನ್ನಾಡಿಸುವದಕ್ಕೆ ಪ್ರಯತ್ನಿಸಿದೆನು. ಇದಲ್ಲದೆ ಅವರ ಮೇಲೆ ಬಹು ಕೋಪಾವೇಶವುಳ್ಳವನಾಗಿ ಪರಪಟ್ಟಣಗಳ ತನಕ ಅವರನ್ನು ಹಿಂಸೆಪಡಿಸಿದೆನು (ಅಪೊಸ್ತಲರ ಕೃತ್ಯಗಳು 26:10, 11).

ಅವನು ತಿಮೊಥಿಗೆ "ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು ಎಂಬ ವಾಕ್ಯವು ನಂಬಕತಕ್ಕದಾಗಿಯೂ ಸರ್ವಾಂಗೀಕಾರಕ್ಕೆ ಯೋಗ್ಯವಾದದ್ದಾಗಿಯೂ ಅದೇ; ಆ ಪಾಪಿಗಳಲ್ಲಿ ನಾನೇ ಮುಖ್ಯನು" ಅಂದನು (1 ತಿಮೊಥೆ 1:15ಬಿ).

1 ಕೊರಿಂಥ 4:4 ಪೌಲನು, "ನನ್ನಲ್ಲಿ ದೋಷವಿದೆಯೆಂದು ನನ್ನ ಬುದ್ಧಿಗೆ ತೋರು ವ

ದಿಲ್ಲವಾದರೂ ದೋಷವಿಲ್ಲದವನೆಂಬ ನಿರ್ಣಯವು ಇದರಿಂದಾಗುವದಿಲ್ಲ. ನನ್ನನ್ನು ವಿಚಾರಣೆ ಮಾಡುವನು ಕರ್ತನೇ" ಎಂದು ಬರೆದಿರುವನು. "ನನ್ನ ಬುದ್ಧಿಗೆ ತೋರುವ" ಎಂಬುದು ಗ್ರೀಕ್ ಭಾಷೆಯ "ಮನಸ್ಸಾಕ್ಷಿ" ಎಂಬ ಕ್ರಿಯಾಪದದ ಅನುವಾದವಾಗಿರುತ್ತದೆ. ಪೌಲನು ಇದರ ನಿಮಿತ್ತವಾಗಿ, ನನ್ನ ಮನಸ್ಸಾಕ್ಷಿಯು ನನ್ನಲ್ಲಿ ದೋಷ ವಿದೆಯೆಂದು ಹೇಳದೆ ಹೋದರು, ನಾನು ದೋಷವಿಲ್ಲದವನೂ ಆಗಿರದೆ; ದೇವರು ಮಾತ್ರ ಇದರ ಕುರಿತು ನಿರ್ಣಯಿಸುವನು ಎಂದು ಹೇಳಿರುವನು.

ಸತ್ಯವೇದವಾಗಲೀ - ಅಥವಾ ಮನುಷ್ಯನ ಅನುಭವವಾಗಲೀ ಧಾರ್ಮಿಕ ವಿಚಾರಗಳಿಗೆ ಮನಸ್ಸಾಕ್ಷಿಯು ಸರಿಯಾದ ಮಾರ್ಗದರ್ಶನವನ್ನು ನೀಡುತ್ತದೆ ಎಂದು ಹೇಳಲಾಗದು. ಕೆಲವು ಸಾರಿ ಸತ್ಯಾಂಶವಿಲ್ಲದ ಅಂಶಗಳನ್ನು ಸತ್ಯವೆಂದು ಜನರು ಅರಿತರು ಎಂದು ಸತ್ಯವೇದದಲ್ಲಿ ಕಾಣುತ್ತೇವೆ. ಉದಾಹರಣೆಗೆ, "ಯಾಕೋಬನು ತನ್ನ ಮಗನಾದ ಯೋಸೇಫನ ರಕ್ತಸಿಕ್ತ ವಾಗಿದ್ದ ಅಂಗಿಯನ್ನು ನೋಡಿ, ತನ್ನ ಮಗನನ್ನು ಯಾವುದೋ ಕಾಡಿನ ಮೃಗವು ಕೊಂದು ಹಾಕಿರಬಹುದೆಂದು ಯಥಾರ್ಥವಾಗಿ ನಂಬಿದನು" (ಆದಿಕಾಂಡ 37:31-35).

ಜನರು ಯಥಾರ್ಥವಾಗಿ ತಪ್ಪುಗಳನ್ನು ಮಾಡಿ, ಯಥಾರ್ಥವಾಗಿ ಅಪಾರ್ಥಮಾಡಿಕೊಳ್ಳಲು ಸಾಧ್ಯತೆಯಿದೆ. ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು; ಕಟ್ಟಕಡೆಗೆ ಅದು ಮರಣ ಮಾರ್ಗವೇ (ಜ್ಞಾನೋಕ್ತಿ 14:12; ಹಾಗೆಯೇ 16:25). ಸುಳ್ಳನ್ನು ನಂಬಿ ನಾಶವಾಗುವ ಸಾಧ್ಯತೆಯಿದೆ (2 ಥೆಸಲೋನಿಕ 2:10-12). ಸತ್ಯವು ಮಾತ್ರ ಒಬ್ಬನನ್ನು ಸ್ವತಂತ್ರಗೊಳಿಸಲು ಸಾಧ್ಯ (ಯೋಹಾನ 8:32).

ಜೀವಿತಕ್ಕೆ ಮನಸ್ಸಾಕ್ಷಿಯ ಮಾರ್ಗದರ್ಶನ ಮಾತ್ರ ಸಾಲದು:[1] ಪ್ರಯಾಣದಲ್ಲಿ ಸುರಕ್ಷೆಯ ಮಾರ್ಗದರ್ಶನವನ್ನು ಅದು ನೀಡಲಾರದು; ನಾನು ಸರಿಯಾದ ಮಾರ್ಗದಲ್ಲಿಯೇ ನಡೆಯುತ್ತಿರುವೆನು ಎಂದು ಭಾವಿಸಿದ್ದೆನು, ಆದರೆ ವಾಸ್ತವವಾಗಿ, ನನ್ನ ಗುರಿಯನ್ನು ತಪ್ಪಿ ನಡೆಯುತ್ತಿದ್ದೆನು. ಆರೋಗ್ಯದ ದೃಷ್ಟಿಯಲ್ಲಿಯೂ ಅದು ನನಗೆ ಸರಿಯಾದ ಮಾರ್ಗದರ್ಶನ ನೀಡಲಾರದು: ಕೆಲವು ವೈದ್ಯರುಗಳು ಬುದ್ಧಿಯಿಂದಲೇ ತಮ್ಮ ರೋಗಿಗಳಿಗೆ ಚಿಕಿತ್ಸೆಯನ್ನು ನೀಡಿರುತ್ತಾರೆ, ನಂತರದಲ್ಲಿ ಅವರು ಇಲ್ಲದ ರೋಗಕ್ಕೆ ಚಿಕಿತ್ಸೆ ನೀಡಿರುವರು ಎಂದು ತಿಳಿದು ಬರುತ್ತದೆ. ವ್ಯವಹಾರದಲ್ಲಿಯೂ ಅದು ಸರಿಯಾದ ಮಾರ್ಗದರ್ಶನ ನೀಡಲಾರದು; ಒಳ್ಳೇ ಮನಸ್ಸಾಕ್ಷಿಯಿಂದಲೇ ಅನೇಕರು ಹೊಸ ವಹಿವಾಟನ್ನು ಆರಂಭಿಸಿದ್ದರು, ಆದರೆ ಸರಿಯಾದ ಮಾರ್ಗದರ್ಶನವನ್ನು ನೀಡಿ ಲಾರದು; ತಾವು ಉತ್ತಮವಾದ ಜೀವನ ಸಂಗಾತಿಗಳನ್ನು ಆಯ್ಕೆ ಮಾಡಿಕೊಂಡಿದ್ದರು ಎಂದು ಭಾವಿಸಿದ್ದರೂ, ಅವರನ್ನು ಯಥಾರ್ಥವಾಗಿ ಅರಿತುಕೊಳ್ಳಲು ಸಾಧ್ಯವಾಗಲಿಲ್ಲ. (ಯಾಕೋಬನು ತನ್ನ ಬುದ್ಧಿಯಿಂದ ರಾಹೇಲಳನ್ನು ಮದುವೆಯಾದನು ಎಂದು ತಿಳಿದಿದ್ದರೂ, ಆಕೆಯ ಸಹೋದರಿಯಾದ ಲೇಹಳನ್ನು ವಾಸ್ತವವಾಗಿ ಮದುವೆ ಯಾಗಿದ್ದನು [ಆದಿಕಾಂಡ 29:21-30]!)

ಧಾರ್ಮಿಕ ವಿಚಾರಗಳಿಗೆ ಮನಸ್ಸಾಕ್ಷಿಯು ಮಾರ್ಗದರ್ಶನ ನೀಡಲು ಸಾಮಾರ್ಥ್ಯವನ್ನು ಹೊಂದಿರುವದಿಲ್ಲ? ಏಕೆಂದರೆ ಅದಕ್ಕೆ ದೊರಕಿರುವ *ವಿವೇಕವು* ಅಲ್ಪವಾಗಿರುತ್ತದೆ.

ಪ್ರತಿಯೊಬ್ಬರು ಮನಸ್ಸಾಕ್ಷಿವುಳ್ಳವರೇ ಎಂದು ನಮ್ಮ ಹಿಂದಿನ ಪಾಠದಲ್ಲಿ ಗಮನಿಸಿದ್ದೇವೆ. ಸ್ವಾಭಾವಿಕವಾಗಿ ಜನರು ಮಾಡುವ ತಪ್ಪು ಹಾಗೂ ಸರಿಗಳ ಬಗ್ಗೆ ತಿಳಿದವರಾಗಿದ್ದಾರೆ. ಕೆಲವು ನಿರ್ದಿಷ್ಟವಾದ ಕಾರ್ಯಗಳು ಸರಿಯಾಗಿಯೂ ಹಾಗೂ ತಪ್ಪಾಗಿಯು ಇರುತ್ತದೆ ಎಂದು ಅನೇ ಕರು ತಿಳಿದವರಾಗಿದ್ದಾರೆ ಈ ಹಿಂದೆ ನಾನು. (ಹಿಟ್ಲರನು ಯೆಹೂದ್ಯರಿಗೆ ನೀಡಿದ ಹಿಂಸೆಯನ್ನು ಅನೇಕರು ಒಪ್ಪುವದಿಲ್ಲ ಎಂಬ ನಿದರ್ಶನವನ್ನು ಈ ಹಿಂದೆ ನೀಡಿರುವೆನು.)

ಈ ಮೂಲ ಭೂತ ಸಂಗತಿಗಳ ಹಿನ್ನೆಲೆಯಲ್ಲಿ ಒಬ್ಬನ ಮನಸ್ಸಾಕ್ಷಿ ತಪ್ಪು ಮತ್ತು ಸರಿ ಎಂದು ಹೇಳುವದಕ್ಕೆ, ಅವನು ಹೊಂದಿರುವ ಬೋಧನೆಯು ಬೆನ್ನಲುಬಾಗಿರುತ್ತದೆ. ಅನೇಕರು ವಿಗ್ರಹಗಳನ್ನು ಪೂಜಿಸುತ್ತಾರೆ, ಅನೇಕರು ಬಹು ಪತ್ನಿತ್ವವನ್ನು ಅನು

ಸರಿಸುತ್ತಾರೆ. ಅಥವಾ ಗುಲಾಮರನ್ನು ಇಟ್ಟುಕೊಂಡಿರುತ್ತಾರೆ, ಈ ವಿಧವಾದ ಬೋಧನೆಗಳನ್ನು ಅವರು ಕೇಳಿರುವದರಿಂದ, ಅವರ ಮನಸ್ಸಾಕ್ಷಿ ಅವರನ್ನು ಈ ವಿಚಾರದಲ್ಲಿ ಖಂಡಿಸುವದಿಲ್ಲ. ವಿಶಿಷ್ಟವಾದ ಹಿನ್ನೆಲೆಯುಳ್ಳ ಸಂಸ್ಕೃತಿಗಳು ಒಟ್ಟಾಗುವಾಗ, ಮನಸ್ಸಾಕ್ಷಿಯ ಭಿನ್ನಾಭಿಪ್ರಾಯಗಳು ಉಂಟಾಗುತ್ತವೆ. ಬ್ರಿಟಿಷರು ಭಾರತ ದೇಶವನ್ನು ತಮ್ಮ ಹತೋಟಿಗೆ ತೆಗೆದುಕೊಂಡಾಗ ಅಲ್ಲಿನ ಹಳೆಪರಂಪರೆಯ ಆಚರಣೆಗಳನ್ನು ನಿರ್ಮೂಲನೆ ಮಾಡಬೇಕಿತ್ತು. ಅದರಲ್ಲಿ ಸತಿ ಸಹಗಮನ ಪದ್ಧತಿಯು ಒಂದಾಗಿತ್ತು. ಬ್ರಿಟಿಷರು ಈ ಪದ್ಧತಿಯನ್ನು ಆಚರಿಸದಂತೆ ಒಂದು ಕಾನೂನನ್ನು ಮಾಡಿತು. ನಂತರದಲ್ಲಿ, ಭಾರತದಲ್ಲಿನ ಧಾರ್ಮಿಕ ನಾಯಕರುಗಳು ಬ್ರಿಟಿಷರ ಮುಂದೆ ಬಂದು ಈ ವಿಚಾರದಲ್ಲಿ ಅಕ್ಷೇಪಮಾಡಿದರು: "ವಿಧವೆಯರನ್ನು ಸುಟ್ಟುಬಿಡಬೇಕೆಂದು ನಮ್ಮ ಮನಸ್ಸಾಕ್ಷಿ ಹೇಳುತ್ತದೆ ಎಂದರು." ಅದಕ್ಕೆ ಅಧಿಕಾರಿಗಳು ಪ್ರತ್ಯುತ್ತರ ನೀಡಿ, "ನೀವು ಇದನ್ನು ಮಾಡಿದರೆ, ನಿಮ್ಮನ್ನು ಗಲ್ಲಿಗೇರಿಸಬೇಕೆಂದು ನಮ್ಮ ಮನಸ್ಸಾಕ್ಷಿ ಹೇಳುತ್ತದೆ!"

ಹಿಂದಿನ ಪಾಠದಲ್ಲಿ ಮನಸ್ಸಾಕ್ಷಿಯನ್ನು ಒಬ್ಬ ನ್ಯಾಯಾಧಿಪತಿಗೆ ಹೋಲಿಸಲಾಗಿದೆ, ಅದು ಸಾಕ್ಷಿ, ವಕೀಲ ಹಾಗೂ ಕಾರ್ಯರೂಪಕ್ಕೆ ತರುವ ವಿಚಾರವಾಗಿದೆ. ಹೇಗೂ ಇದು ಒಬ್ಬ ನ್ಯಾಯಾಧಿಪತಿಗೆ ಸೇರಿದ ಕೆಲಸವಲ್ಲ, ಅವರು ಕಾನೂನನ್ನು ಹೇರುವವರಷ್ಟೆ. ಅದೇ ರೀತಿಯಲ್ಲಿ ಮನಸ್ಸಾಕ್ಷಿಯು ತೀರ್ಪುನೀಡಿ, ಅದನ್ನು ಕಾರ್ಯರೂಪಕ್ಕೆ ತರುವ ಸಂಗತಿಯಾಗಿದ್ದರೂ, ಅದು ಕಾನೂನನ್ನು ನಿರ್ಮಿಸುವ ಅಧಿಕಾರವನ್ನು ಹೊಂದಿರುವದಿಲ್ಲ. ಆತ್ಮೀಯ ಮತ್ತು ಧೈಹಿಕವಾಗಿ ದೊರೆಯುವ ನೈತಿಕ ನಿಯಮಗಳನ್ನು ಮಾತ್ರ ನೀಡಬಹುದು.

1 ಕೊರಿಂಥ 8 ರಿಂದ 10 ಹಾಗೂ ರೋಮಾಪುರ 14 ಮತ್ತು 15ರಲ್ಲಿರುವ ಮನಸ್ಸಾಕ್ಷಿಯ "ಬಲ" ಮತ್ತು "ಭಲಹೀನತೆ" ಎಂಬುದರ ಅರ್ಥವನ್ನು ಗಮನಿಸಿರಿ (ರೋಮಾಪುರ 15:1) ವಿಗ್ರಹಗಳಿಗೆ ಸಮರ್ಪಿಸಿದ ಯಜ್ಞವನ್ನು ತಿನ್ನುವ ವಿಷಯದಲ್ಲಿ ಭಲವಾದ ಮನಸ್ಸಾಕ್ಷಿಯನ್ನು ಹೊಂದಿ ಅದರ ಕುರಿತ *ತಿಳುವಳಿಕೆಯನ್ನು* ಹೊಂದಿದವನು ಎಂಬುದಾಗಿದೆ:

> ವಿಗ್ರಹಗಳಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವದರ ವಿಷಯದಲ್ಲಿ *ನಾನು ಹೇಳುವದೇನಂದರೆ* ಜಗತ್ತಿನಲ್ಲಿ ವಿಗ್ರಹವು ಏನೂ ಅಲ್ಲವೆಂದೂ ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದೂ ಬಲ್ಲೆವು (1 ಕೊರಿಂಥ 8:4; ಒತ್ತಿ ಹೇಳಿದ್ದು ನನ್ನದು).

> *ಜ್ಞಾನಿಯಾದ ನೀನು* ವಿಗ್ರಹಾಲಯದಲ್ಲಿ ಊಟಕ್ಕೆ ಕೂತಿರುವಾಗ ನಿರ್ಬಲವಾದ ಮನಸ್ಸುಳ್ಳ ಸಹೋದರನು ಕಂಡರೆ ಅವನೂ ವಿಗ್ರಹಕ್ಕೆ ನೈವೇದ್ಯ ಮಾಡಿದ ಪದಾರ್ಥಗಳನ್ನು ತಿನ್ನುವದಕ್ಕೆ ಧೈರ್ಯತಂದುಕೊಂಡಾನಲ್ಲವೇ. ಹೀಗೆ ಆ ಬಲಹೀನನು *ನಿನ್ನ ಜ್ಞಾನದಿಂದ* ನಾಶವಾಗುತ್ತಾನೆ. ಅವನು ಸಹೋದರನಲ್ಲವೇ. ಅವನಿಗಾಗಿಯೂ ಕ್ರಿಸ್ತನು ತನ್ನ ಪ್ರಾಣಕೊಟ್ಟವನಲ್ಲವೇ (1 ಕೊರಿಂಥ 8:10, 11; ಒತ್ತಿ ಹೇಳಿದ್ದು ನನ್ನದು).

"ಬಲಹೀನವಾದ" ಮನಸ್ಸಾಕ್ಷಿಯ ಕುರಿತಾಗಿ ಹೇಳುವದಾದರೆ (ರೋಮಾಪುರ 15:1). ಅವನಿಗೆ ಆ ತಿಳುವಳಿಕೆಯು ಇರುವದಿಲ್ಲ: *"ಆದರೆ ಆ ಜ್ಞಾನವು ಎಲ್ಲರಲ್ಲಿಯೂ ಇರುವದಿಲ್ಲ;* ಕೆಲವರು ಈ ವರೆಗೂ ವಿಗ್ರಹದ ಬಳಿಗೆ ಹೋಗುವ ರೂಢಿಯಲ್ಲಿದದ್ದರಿಂದ ತಾವು ತಿನ್ನುವ ಪದಾರ್ಥಗಳನ್ನು ವಿಗ್ರಹಕ್ಕೆ ನೈವೇದ್ಯ ಮಾಡಿದ್ದೆಂದು ತಿನ್ನುತ್ತಾರೆ; ಹೀಗೆ ಅವರ ಮನಸ್ಸು *ಬಲಹೀನವಾಗಿದ್ದು* ಕಲೆಯನ್ನು ಹೊಂದುತ್ತದೆ" (1 ಕೊರಿಂಥ 8:7; ಒತ್ತಿ ಹೇಳಿದ್ದು ನನ್ನದು).[2]

ಒಬ್ಬರು ಹೇಳಿರುವಂತೆ, ಮನುಷ್ಯನೊಬ್ಬನಲ್ಲಿರುವ ಉತ್ತಮವಾದ ತಿಳುವಳಿಕೆಗೆ, ಮನಸ್ಸಾಕ್ಷಿಯು ಹೊಂದಿಕೊಳ್ಳುತ್ತದೆ. "ತಿಳುವಳಿಕೆ" ಎಂಬುದು ಪ್ರಮುಖವಾದ ಪದವಾಗಿದೆ. ಪರಿಪಕ್ವವಾದ ತಿಳುವಳಿಕೆಯು (ವಾಕ್ಯದ ಜ್ಞಾನ) ಒಳೇದರ ಮತ್ತು ಕೆಟ್ಟದ್ದರ ನಡುವೆ ಇರುವ ಬೇಧವನ್ನು ತೋರಿಸುತ್ತದೆ (ಇಬ್ರಿಯ 5:13, 14).

ಆದ್ದರಿಂದ "ನನ್ನ ಮನಸ್ಸಾಕ್ಷಿ ಹೇಳುವದೇ ಸರಿ?" ಎಂಬುದು ಪ್ರಮುಖ ಪ್ರಶ್ನೆಯಾಗಿರದೆ, "ದೇವರ ವಾಕ್ಯ ಏನನ್ನು ಹೇಳುತ್ತದೆ?" ಎಂಬುದೇ ಪ್ರಮುಖವಾಗಿರುತ್ತದೆ. ತನ್ನನ್ನು ತಾನೇ ಹೊಗಳಿಕೊಳ್ಳುವವನು ಯೋಗ್ಯನಲ್ಲ; ಕರ್ತನು ಯಾರನ್ನು ಹೊಗಳುತ್ತಾನೋ ಅವನೇ ಯೋಗ್ಯನು ಎಂದು ಓದುತ್ತೇವೆ (2 ಕೊರಿಂಥ 10:18).

ವಿವೇಕ ಪೂರ್ವಕ ಹೇಳಿಕೆಯಂತೆ, "ಮನಸ್ಸಾಕ್ಷಿಯು ಎಲ್ಲಿಯವರೆಗೂ ಸುರಕ್ಷಿತ ವಾಗಿ ನಡೆಸುತ್ತದೋ ಅಲ್ಲಿಯವರೆಗೂ ಮಾತ್ರ ಅದು ಸುರಕ್ಷಿತವಾದ ಮಾರ್ಗದರ್ಶಕ ವಾಗಿರುತ್ತದೆ" ದೇವರ ವಾಕ್ಯದ ಆಧಾರದಿಂದ ಅದು ನಡೆಸುವದಾದರೆ, ಅದು ಸುರಕ್ಷೆಯ ಮಾರ್ಗದರ್ಶನವಾಗಿರುತ್ತದೆ. ಆದ್ದರಿಂದ ಮನುಷ್ಯರು "ಆತ್ಮಸಾಕ್ಷಿಯನ್ನು ಹೊಂದಿರುವರೇ?" ಎಂಬ ಪ್ರಶ್ನೆಯಾಗಿರದೆ, ಜನರು ಶಿಶು ದೀಕ್ಷಾಸ್ನಾನವನ್ನು ಮಾಡಿಸುತ್ತಾ, ಕರ್ತನ ಭೋಜನ ವನ್ನು ವಾರದ ಮೊದಲನೆಯ ದಿನದಲ್ಲಿ ಮಾಡದೆ, ಅಥವಾ ಆರಾಧನೆಯಲ್ಲಿ ವಾದ್ಯಗಳನ್ನು ನುಡಿಸುತ್ತಾ ಇರುವದಾದರೆ, *ಸತ್ಯವೇದವು* ಈ ವಿಚಾರದಲ್ಲಿ ಏನನ್ನು ಬೋಧಿಸುತ್ತದೆ? ಎಂಬ ಪ್ರಶ್ನೆಯೇ ಉದ್ಭವಿಸಬೇಕು.

ಆದ್ದರಿಂದ ಧಾರ್ಮಿಕ ವಿಚಾರಗಳಿಗೆ ಮನಸ್ಸಾಕ್ಷಿಯು ಸರಿಯಾದ ಮಾರ್ಗದರ್ಶನವನ್ನು ನೀಡಲಾರದು, ಯಾಕೆಂದರೆ ಅದಕ್ಕೆ ತಿಳುವಳಿಕೆಯ ಜ್ಞಾನದ ಕೊರತೆಯಿದೆ. ಹಾಗೂ ಎರಡನೆಯ ಕಾರಣವೇನೆಂದರೆ: ಹಲವಾರು ಜನರು ತಮ್ಮ ಮನಸ್ಸಾಕ್ಷಿಯನ್ನು ನಿಂದಿಸಿರುವದರಿಂದ, ಅದು ಇನ್ನೆಂದಿಗೂ ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಸಲಾರದು. ಸಾಕ್ಷಿ ಹೇಳುವ ಮನಸ್ಸನ್ನು ಅಭ್ಯಾಸಮಾಡಿಕೊಳ್ಳಬೇಕು (ಅಪೊಸ್ತರ ಕೃತ್ಯಗಳು 24:16; KJV).

ಮನಸ್ಸಾಕ್ಷಿಯನ್ನು ಅಲಕ್ಷ್ಯ ಮಾಡುವವನು, ಅದನ್ನು ಮಲಿನ ಮಾಡಿಕೊಂಡಿದ್ದಾನೆ (ತೀತ 1:15), ಮತ್ತು ಅಪರಾಧಿಗಳೂ ಆಗಿರುವರು (1 ತಿಮೊಥೆ 4:2). ಮಲಿನವಾದ, ಅಪರಾಧಿ ಮನಸ್ಸಾಕ್ಷಿಯನ್ನು ಒಂದು ಕಿಟಕಿಗೆ ಹೋಲಿಸಬಹುದು, ಅದು ಬಹಳ ಕೊಳ ಕಾಗಿರುವದರಿಂದ ತನ್ನ ಉದ್ದೇಶವನ್ನು ಈಡೇರಿಸಲಾಗದು. ಮತ್ತಾಯ 6ರಲ್ಲಿ ಯೇಸು ಒಂದು ದೃಷ್ಟಾಂತವನ್ನು ತಿಳಿಸಿರುವನು:

> ಕಣ್ಣು ದೇಹಕ್ಕೆ ದೀಪವಾಗಿದೆ; ಹೀಗಿರುವಲ್ಲಿ ನಿನ್ನ ಕಣ್ಣು ನೆಟ್ಟಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವದು. ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ ನಿನ್ನ ದೇಹವೆಲ್ಲಾ ಕತ್ತಲಾಗಿರುವದು. ಹಾಗಾದರೆ ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟೆನ್ನ ಬೇಕು! (ಮತ್ತಾಯ 6:22, 23; NCV).

"ಕಣ್ಣು" ಎಂಬ ಪದವನ್ನು ಯೇಸು ಬಳಸಿರುವನು, ಅದು ಆತ್ಮೀಯ ಸಂಗತಿಗಳನ್ನು ಗ್ರಹಿಸುವಂಥದ್ದಾಗಿದೆ. ಧೈಹಿಕವಾದ ಕಣ್ಣು ಕುರುಡಾಗಿದ್ದರೆ, ದೇಹವು ಸಹ ಕತ್ತಲಿನಲ್ಲಿರುತ್ತದೆ. ಅದೇ ರೀತಿಯಲ್ಲಿ, ಒಳ್ಳೇದರ ಮತ್ತು ಕೆಟ್ಟದ್ದರ ಸಂಗತಿಗಳನ್ನು ವಿವೇಚಿಸುವದರಲ್ಲಿ ಸಾಮರ್ಥ್ಯವನ್ನು ಕಳಕೊಂಡರೆ, ಒಬ್ಬನು ಆತ್ಮೀಕವಾದ ಕತ್ತಲೆಗೆ ಒಳಗಾಗುತ್ತಾನೆ.

ಮನಸ್ಸಾಕ್ಷಿಯ ಸದ್ಬಳಕೆ ಮತ್ತು ತಪ್ಪಾದ ಬಳಕೆಯಿಂದ, ತೀರ್ಪಿನ ವಿಧಾನವು ತಲೆಕೆಳಗಾಗುವ ಸಾಧ್ಯತೆಯಿದೆ. ಯೆಶಾಯನು ಬರೆದು, ಕೆಟ್ಟದ್ದನ್ನು ಒಳ್ಳೆದೆಂದು, ಒಳ್ಳೇದನ್ನು ಕೆಟ್ಟದೆಂದು ಬೋಧಿಸಿ ಕತ್ತಲನ್ನು ಬೆಳಕೆಂದು, ಬೆಳಕನ್ನು ಕತ್ತಲೆಂದು ಹೇಳುವವರ ಗತಿಯನ್ನು ಏನು ಹೇಳಲಿ ಅಂದನು (ಯೆಶಾಯ 5:20ಎ, ಬಿ). "ನಾಚಿಕೆ ಕೆಲಸಗಳಲ್ಲಿಯೇ ಅವರ ಗೌರವವು" (ಫಿಲಿಪ್ಪಿ 3:19ಸಿ) ಎಂದು ಪೌಲನು ಬರೆದಿರುವನು.

ನನ್ನ ಎರಡನೇ ಪ್ರಶ್ನೆಯಾದ ನಿಮ್ಮನ್ನು ನಡೆಸುವದಕ್ಕೆ ಮನಸ್ಸಾಕ್ಷಿಯ ಅಗತ್ಯವು ನಮಗಿದೆಯೇ? ಎಂಬ ಪ್ರಶ್ನೆಗೆ "ಮನಸ್ಸಾಕ್ಷಿಯನ್ನು ನಿಂದಿಸುವಾಗ ಉಂಟಾಗುವ

ಪರಿಣಾಮಗಳ ಕುರಿತ ಉತ್ತರವೇ ಆಗಿರುತ್ತದೆ?'':

## "ಹೌದು'' ತೀರ್ಪಿನ ವಿಚಾರದಲ್ಲಿ ಮನಸ್ಸಾಕ್ಷಿಯು ನೀಡುವ ತೀರ್ಮಾನವನ್ನು ಅಲಕ್ಷಿಸಬಾರದು

ಧಾರ್ಮಿಕ ವಿಚಾರಗಳಲ್ಲಿ ಮನಸ್ಸಾಕ್ಷಿಯ, ಮಾರ್ಗದರ್ಶನ ಮಾತ್ರ ಸಾಲದು ಎಂಬ ತತ್ವವನ್ನು ತಿಳಿದ ಮೇಲೆ, ಮನಸ್ಸಾಕ್ಷಿಯು ಅಷ್ಟು ಪ್ರಮುಖವಲ್ಲ ಎಂದು ನಿರ್ಣಯಿಸಬಹುದು; ಆದರೆ ಯಾವದೂ ಸಹ ಸತ್ಯದಿಂದ ದೂರವಿರಲಾರದು. ನಾವು ನಮ್ಮ ಮನಸ್ಸಾಕ್ಷಿಯ ನಿಯಮವನ್ನು ಮೀರುವಾಗ, ಪಾಪ ಮಾಡುವೆವು ಎಂಬ ಅಂಶವನ್ನು ಪೌಲನು ತಿಳಿಸಿರುವನು:

> ಯಾವ ಪದಾರ್ಥವೂ ಸ್ವತಃ ಅಶುದ್ಧವಾದದ್ದಲ್ಲವೆಂದು ಬಲ್ಲೆನು, ಮತ್ತು ಕರ್ತನಾದ ಯೇಸುವಿನಲ್ಲಿದ್ದುಕೊಂಡು ದೃಢವಾಗಿ ನಂಬಿದ್ದೇನೆ; ಆದರೆ ಯಾವದಾದರೂ ಒಂದು ಪದಾರ್ಥವನ್ನು ಅಶುದ್ಧವೆಂದು ಒಬ್ಬನು ಭಾವಿಸಿದರೆ ಅವನಿಗೆ ಅದು ಅಶುದ್ಧ (ರೋಮಾಪುರ 14:14).

> ಸಂಶಯಪಟ್ಟು ಉಣ್ಣುವವನು ಸಂಶಯದಿಂದ ಉಣ್ಣುವ ಕಾರಣ ದೋಷಿಯಾಗಿದ್ದಾನೆ. ಯಾವದಕ್ಕೆ ನಂಬಿಕೆಯು ಆಧಾರವಿಲ್ಲವೋ ಅದು ಪಾಪ (ರೋಮಾಪುರ 14:23).

ಇಲ್ಲಿರುವ "ನಂಬಿಕೆ'' ಎಂಬುದು, ದೇವರ ವಾಕ್ಯದಿಂದ ಉಂಟಾಗುವ "ನಂಬಿಕೆ'' ಎಂಬುದಾಗಿರುವದಿಲ್ಲ (ರೋಮಾಪುರ 10:17), ನಂಬಿರುವಂಥದ್ದು ಸರಿಯೇ ಅಥವಾ ತಪ್ಪೇ ಎಂಬುದು ಅರ್ಥವಾಗಿರುತ್ತದೆ. ಒಬ್ಬನು ತಾನು ನಂಬಿರುವ ವಿಚಾರದಲ್ಲಿ ಸರಿ ಅಥವ ತಪ್ಪು ಎಂಬುದಕ್ಕೆ ತದ್ವಿರುದ್ಧವಾಗಿದ್ದಾನೆ (ಅಂದರೆ ತನ್ನ ಮನಸ್ಸಾಕ್ಷಿಯನ್ನೇ ಮೀರುವವನಾಗಿದ್ದಾನೆ), ಆದ್ದರಿಂದ ಒಬ್ಬನು ಈ ಪಾಪದ ನಿಮಿತ್ತ ಖಂಡನೆಗೆ ಒಳಗಾಗುವನು ಎಂದು ಪೌಲನು ತಿಳಿಸಿರುವನು.[3]

ಮನಸ್ಸಾಕ್ಷಿಯನ್ನು ಮೀರುವದು ಏಕೆ ಪಾಪವಾಗುತ್ತದೆ? ಯಾಕಂದರೆ ಒಬ್ಬನು ತನ್ನ ಮನಸ್ಸಾಕ್ಷಿಗೆ ವಿರುದ್ಧವಾಗಿ ನಡಕೊಳ್ಳುವ ಪ್ರತಿ ಸಂದರ್ಭದಲ್ಲೂ, ತನ್ನ ಮನಸ್ಸಾಕ್ಷಿಯನ್ನು ಪರಿಣಾಮಕಾರಿಯಾಗದಂತೆ ಮಾಡುತ್ತಾನೆ. ಅವನು ದೇವರೇ ನೀಡಿರುವ ಸುರಕ್ಷೆಯನ್ನು ನಾಶಪಡಿಸುವವನಾಗಿದ್ದಾನೆ. ನಮ್ಮ ಹಿಂದಿನ ಪಾಠದಲ್ಲಿ ನಾನು ನರಮಂಡಲದ ಕ್ರಿಯೆಯ ಬಗ್ಗೆ ತಿಳಿಸಿರುವೆನು, ಮತ್ತು ಅದನ್ನು ಮನಸ್ಸಾಕ್ಷಿಗೆ ಹೋಲಿಸಿರುವೆನು. ಬೆಂಕಿಯಿಂದ ದೂರವಿರು ಎಂಬ ನರಗಳು ನೀಡುವ ಸೂಚನೆಯನ್ನು ನಾನು ಅಲಕ್ಷಮಾಡಿದರೆ, ಬೇಗನೆ ನನ್ನ ನರ ಮಂಡಲದ ವ್ಯವಸ್ಥೆಯೇ ನಾಶವಾಗುತ್ತದೆ (ಅದರೊಂದಿಗೆ ನಾನೂ ಸಹ ನಾಶವಾಗುತ್ತೇನೆ!).

ಒಬ್ಬ ಯೌವನಸ್ಥ ಹುಡುಗಿಯು ಮನಸ್ಸಾಕ್ಷಿಯನ್ನು ನಮ್ಮೊಳಗೆ ಉರುಳುತ್ತಿರುವ ಚೂಪಾದ ಮೊಳೆಗಳನ್ನು ಹೊಂದಿರುವ ಒಂದು ಚಕ್ರಕ್ಕೆ ಹೋಲಿಸಿರುವಳು. "ನಾವು ಮಾಡಬಾರದ ಕಾರ್ಯಗಳನ್ನು ಮಾಡುವಾಗ, ಆ ಚೂಪಾದ ಮೊನೆಗಳು ನಮಗೆ ಗಾಯ ಉಂಟುಮಾಡುತ್ತವೆ!'' ನಂತರ ಆಕೆಯು, "ನಾವು ಮಾಡಬಾರದ ಕಾರ್ಯಗಳನ್ನು ಮಾಡುವಲ್ಲಿ ಮುಂದುವರಿಯುವಾಗ, ಆ ಚೂಪಾದ ಮೊನೆಗಳು, ತಮ್ಮ ಹರಿತವನ್ನು ಕಳಕೊಳ್ಳುತ್ತವೆ. ನಂತರ ಅದರಿಂದ ವೇದನೆಯ ಉಂಟಾಗುವದಿಲ್ಲ ಎಂದು ಹೇಳಿರುವಳು. ಮಾಡಬಾರದ ಕಾರ್ಯಗಳನ್ನು ಮಾಡುವಲ್ಲಿಯೇ ಮುಂದುವರಿಯುವಾಗ ಸಹಜವಾಗಿ ಆ ಚೂಪಾದ ಮೊನೆಗಳು ಮೊಂಡಾಗಿ, ನಮಗೆ ವೇದನೆಯೇ ಇಲ್ಲವಾಗುತ್ತದೆ.''

ಮನಸ್ಸಾಕ್ಷಿಯನ್ನು ಅಸಡ್ಡೆ ಮಾಡಿದ ಕುರಿತು ಒಂದು ಕಥೆಯನ್ನು ಓದಿರುವೆನು. ಸ್ಕಾಟ್‌ಲ್ಯಾಂಡಿನ ಒಂದು ಭಯಾನಕ ಸಮುದ್ರ ತೀರದಲ್ಲಿ, ಘಂಟೆಯನ್ನು ಹೊಂದಿದ್ದ ಒಂದು ಎಚ್ಚರಿಕೆಯ ಕಂಬವನ್ನು ಸ್ಥಾಪನೆ ಮಾಡಲಾಗುತ್ತಿತ್ತು. ಆಸ್ಥಳದಲ್ಲಿದ್ದ ನಿವಾಸಿಗಳ ಬಗ್ಗೆ ಕೋಪಗೊಂಡಿದ್ದ ಒಬ್ಬ ಸಮುದ್ರ ಯಾನದ ನಾಯಕನು ಕುಡಿದ ಮತ್ತಿನಲ್ಲಿ, ಕಂಬದಲ್ಲಿದ್ದ ಘಂಟೆಯನ್ನು ಹೊಡೆದುರುಳಿಸಿದನು. ಈ ರೀತಿಯಾಗಿ ಆ ಸ್ಥಳೀಯ ಜನರ ಮೇಲೆ ಸೇಡು ತೀರಿಸಿಕೊಂಡಿದ್ದನು. ತರುವಾಯ, ಒಂದು ಸಾರಿ ಅದೇ ಸಮುದ್ರ ತೀರದಲ್ಲಿ ಅವನ ಹಡಗು ಸಂಕಷ್ಟಕ್ಕೆ ಈಡಾಯಿತು. ಆ ಸಮಯದಲ್ಲಿ ಅವನಿಗೆ ಎಚ್ಚರಿಕೆಯನ್ನು ನೀಡುವ ಘಂಟೆಯ ಶಬ್ಧವನ್ನು ಕೇಳಲಾರದಾದನು. ಆ ಹಡಗಿನ ನಾಯಕನ ಮೂರ್ಖತನದಿಂದಾಗಿ, ಅವನು ಮತ್ತು ಅವನ ಸಂಗಡ ಹಡಗಿನಲ್ಲಿದ್ದವರೆಲ್ಲರೂ ನಾಶವಾದರು. ಈ ಕಥೆಯಲ್ಲಿರುವ ನೀತಿ ಪಾಠವೇನೆಂದರೆ: ಒಬ್ಬನು ತನ್ನ ಮನಸ್ಸಾಕ್ಷಿಯನ್ನು ಅಸಡ್ಡೆ ಮಾಡಿದರೆ, ಅದನ್ನು ಅವನು ಬಯಸುವಾಗ, ಅವನಿಗೆ ಅದು ದೊರಕುವದಿಲ್ಲ.

1 ತಿಮೊಥೆ 1:19ರಲ್ಲಿ ಪೌಲನು ಇನ್ನೊಂದು ವಿಧವಾದ ದೃಷ್ಟಾಂತವನ್ನು ತಿಳಿಸಿರುವನು: "ನಂಬಿಕೆಯನ್ನೂ ಒಳ್ಳೇ ಮನಸ್ಸಾಕ್ಷಿಯನ್ನೂ ಬಿಡದೆ ಹಿಡುಕೋ ಕೆಲವರು ಮನಸ್ಸಿನ ಒಳ್ಳೇ ಸಾಕ್ಷಿಯನ್ನು ತಳ್ಳಿಬಿಟ್ಟು ಕ್ರಿಸ್ತ ನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟ ಪಟ್ಟವರಂತೆ ಇದ್ದಾರೆ." "ತಿರಸ್ಕರಿಸಲ್ಪಟ್ಟ" ಮನಸ್ಸಾಕ್ಷಿಯನ್ನು ಹಡಗಿನ ಒಂದು ಕಾರ್ಯನಿರ್ವಹಿಸದ ಚುಕ್ಕಾಣಿಗೆ ಹೋಲಿಸಬಹುದು. ಈ ನಿಮಿತ್ತವಾಗಿ ಕಾರ್ಯನಿರ್ವಹಿಸದ ಚುಕ್ಕಾಣಿಗೆ ಹೋಲಿಸಬಹುದು, ಈ ನಿಮಿತ್ತವಾಗಿ ಹಡಗು ಹೋಗುವ ಸಾಧ್ಯತೆಗಳಿವೆ.

ಆಗಾಗ್ಗೆ ಅಲಕ್ಷ್ಯಕ್ಕೆ ಒಳಗಾದ ಮನಸ್ಸಾಕ್ಷಿಯ ಕುರಿತು ಸತ್ಯವೇದವು ವಿವಿಧವಾದ ರೂಪದಲ್ಲಿ ಸಹಾಯ ಮಾಡುತ್ತದೆ. ಅಲಕ್ಷಕ್ಕೆ ಒಳಗಾದ ಮನಸ್ಸಕ್ಷಿಯು, ಪ್ರತಿಕ್ರಿಯಿಸದ ನರಗಳಂತೆ ಇರುತ್ತದೆ (1 ತಿಮೊಥೆ 4:12). ಮತ್ತಾಯ 6:22, 23ರ ವಿಶೇಷವಾದ ಯೇಸುವಿನ ದೃಷ್ಟಾಂತವನ್ನು ಗಮನಿಸೋಣ, ಇಲ್ಲಿ ಕತ್ತಲಾದ ಕಣ್ಣಿನ ಬಗ್ಗೆ ಯೇಸು ತಿಳಿಸಿರುವನು. ಪಾಪ ಮಾಡಿದಾಗಲೆಲ್ಲಾ, ನಮ್ಮ ದೃಷ್ಟಿಯಲ್ಲಿ ಅಲ್ಪ ಭಾಗವನ್ನು ಕಳಕೊಂಡರೆ ಪರಿಸ್ಥಿತಿ ಏನಾಗಬಹುದು? ಪಾಪ ಮಾಡದಂತೆ ಈ ಸಂಗತಿಯು ಸಹಾಯಿಸುವದಲ್ಲವೇ? ನಾವು ಧೈಹಿಕವಾದ ದೃಷ್ಟಿಯನ್ನು ಕಳಕೊಳ್ಳದೆ ಹೋದರೂ, ಮನಸ್ಸಾಕ್ಷಿಯನ್ನು ವಿರೋಧಿಸುವಾಗ, ನಾವು ಆತ್ಮೀಕವಾದ ದೃಷ್ಟಿಯನ್ನು ಕಳಕೊಳ್ಳುತ್ತೇವೆ ಎಂದು ಯೇಸು ತಿಳಿಸಿರುವನು. ಇದರ ನಿಮಿತ್ತವಾಗಿ, ನಾವು ಪಾಪವನ್ನು ಬಲವಾಗಿ ವಿರೋಧಿಸಬಹುದು.

ಮನಸ್ಸಾಕ್ಷಿಯನ್ನು ವಿರೋಧಿಸಿದ ಅನೇಕ ಸಹೋದರ ಸಹೋದರಿಯರ ಬಗ್ಗೆ ಸತ್ಯ ವೇದವು ಅನೇಕ ನಿದರ್ಶನಗಳನ್ನು ಹೊಂದಿರುತ್ತದೆ, ಈ ಕಾರಣದಿಂದ ಅವರು ಮೌನವಾದರು. ಸೌಲನು ಅನೇಕ ವಾಗ್ದಾನಗಳ ಮೂಲಕ ಆಡಳಿತವನ್ನು ಆರಂಭಿಸಿದರೂ, ಅವನು ಸ್ವಾರ್ಥದ ಶಕ್ತಿಯ ಶೋಧನೆಗೆ ಒಳಗಾದನು. ಅಂತಿಮ ವಾಗಿ ಅವನ ಮನಸ್ಸು ಹಾಗೂ ಬುದ್ಧಿ ಕಠಿಣವಾದ್ದರಿಂದ, ದೇವರು ತನ್ನ ಆತ್ಮವನ್ನು ಅವನಿಂದ ತೆಗೆದು ಹಾಕಿದನು (1 ಸಮುವೇಲ 16:14ಎ).

ಸೌಲನ ಉತ್ತರಾಧಿಕಾರಿಯಾದ ದಾವೀದನ ವಿಶೇಷ ನಿದರ್ಶನದಲ್ಲಿ, ಅವನು ಸೌಮ್ಯ ಸ್ವಭಾವದವನಾಗಿದ್ದರೂ, ಪಾಪದ ನಂತರ ಪಾಪವನ್ನು ಮಾಡಿದನು, ಈ ಕಾರಣದಿಂದ ವಾರಗಳ ಕಾಲ ಅವನ ಮನಸ್ಸಾಕ್ಷಿ ಅವನನ್ನು ಹಂಗಿಸುತ್ತಿತ್ತು. ಈ ಸಂಗತಿಯ ಕುರಿತು ಅವನ ಸ್ನೇಹಿತನು ಅವನಿಗೆ ಸಹಾಯ ಮಾಡದಿದ್ದರೆ (2 ಸಮು ವೇಲ 12:1-14), ಅವನು ನಿತ್ಯನಾಶವನ್ನು ಹೊಂದುವ ಸಾಧ್ಯವಿತ್ತು.

ಒಬ್ಬನ ಮನಸ್ಸಾಕ್ಷಿ ಅವನಿಗೆ ತಪ್ಪಾದ ಮಾಹಿತಿಯನ್ನು ನೀಡುವದಾದರೆ, ಅದನ್ನು ಪುನಃ ತಿದ್ದುವ ಕಾರ್ಯವನ್ನು ಮಾಡಬೇಕಾಗುತ್ತದೆ. ಅದನ್ನು ಪುನಃ ತಿದ್ದುವವರೆಗೆ ಅದು ನೀಡುವ ಸಲಹೆಗಳ ಬಗ್ಗೆ ಒಬ್ಬನು ಚಿಂತಿಸಬೇಕಾಗುತ್ತದೆ. ಒಂದು ದೃಷ್ಟಾಂತದಂತೆ, ಒಬ್ಬನು ತನ್ನ

ಜೀವಿತದಲ್ಲಿ ಮಾಂಸವನ್ನು ಕೆಲವು ಕಾಲ ಬುಜಿಸಬಾರದೆಂದು ದೇವರು ತಿಳಿಸಿರುವನೆಂದು ತಿಳಿದುಕೊಂಡಿರಬಹುದು ಎಂದು ಊಹಿಸೋಣ. ಒಬ್ಬನು ಇಚ್ಛಿಸಿದರೆ ಮಾಂಸವನ್ನು ಬುಜಿಸಬಹುದೆಂದು ಸತ್ಯವೇದವು ತಿಳಿಸುತ್ತದೆ (1 ತಿಮೊಥೆ 4:1-5). ಈ ಸತ್ಯಾರ್ಥವನ್ನು ಒಬ್ಬನು ತಿಳಿಯುವದಾದರೆ, ಅವನು ಈ ಹಿಂದೆ ಮಾಡಿದ ಕಾರ್ಯವನ್ನು ಮುಂದುವರಿಸಲು ಯಾವುದೇ ಅಭ್ಯಾಂತರವಿರುವದಿಲ್ಲ. ಈ ಸಂಗತಿಯನ್ನು ಸುರಕ್ಷತೆ ಇಲ್ಲದ ಸೇತುವೆಯನ್ನು ದಾಟುವ ಪ್ರಮೇಯಕ್ಕೆ ಹೋಲಿಸಬಹುದು. ಎಲ್ಲಿಯವರೆಗೆ ಸೇತುವೆಯು ಸುರಕ್ಷೆ ಇಲ್ಲವೆಂದು ತಿಳಿಯುತ್ತೇವೋ, ಅಲ್ಲಿಯವರೆಗೆ ಆಸೇತುವೆಯಿಂದ ದೂರ ಉಳಿಯಬೇಕು. ಆ ಸೇತುವೆಯು ನಮ್ಮ ಭಾರವನ್ನು ನಾವು ದಾಟಬಹುದೇ ವಿನಃ ಈ ಆಲೋಚನೆಯು ಉಂಟಾಗುವ ಮೊದಲು ಈ ಕಾರ್ಯವನ್ನು ಮಾಡಲು ಸಾಧ್ಯವಿರುವದಿಲ್ಲ.

ಮನಸ್ಸಾಕ್ಷಿಯನ್ನು ಪುನಃ ತಿದ್ದುವ ಕಾರ್ಯವು ಪ್ರಗತಿಪರ ಕಾರ್ಯವಾಗಿದೆ. ಅದನ್ನು ನಾವು ಹೇಗೆ ಮಾಡಲು ಸಾಧ್ಯ? ಮೊದಲನೆಯದಾಗಿ, ನಾವುಗಳು ಸತ್ಯವೇದವನ್ನು ನಿರಂತರವಾಗಿಯೂ, ತಿಳುವಳಿಕೆಯಿಂದಲೂ ಓದಬೇಕು, ಆದರಿಂದ ದೇವರು ನನಗೆ ತೋರುವ ಆತನ ಪರಿಪೂರ್ಣವಾದ ಚಿತ್ತವನ್ನು ಅರಿತುಕೊಳ್ಳಬೇಕು. ಎರಡನೆಯದಾಗಿ, ದೇವರ ವಾಕ್ಯಕ್ಕನುಗುಣವಾಗಿ, ನಮ್ಮ ಮನವರಿಕೆಯ ಕುರಿತು ಭಯವಿಲ್ಲದೆ ಪರಿಶೋಧಿಸಿ ಕೊಳ್ಳಬೇಕು.

ಅದೇ ಸಮಯದಲ್ಲಿ, ನಾವು ಬಹಳ ದಿವಸಗಳಿಂದ ಹೊಂದಿರುವ ತಪ್ಪಾದ ಮನವರಿಕೆಯನ್ನು ಅರಿತುಕೊಳ್ಳಬೇಕು. ನಮ್ಮ ಮನಸ್ಸಾಕ್ಷಿ ಹೇಳುವದನ್ನು ಪಾಲಿಸೋಣ. ಒಂದು ಸಾರಿ ಮಹಾ ಸುಧಾರಕನಾದ ಮಾರ್ಟಿನ್ ಲೂಥರನ್ನು ತನ್ನ ವಿಚಾರಣೆಯ ಸಮಯದಲ್ಲಿ, ಒಂದು ವಿಶೇಷವಾದ ಹೇಳಿಕೆಯನ್ನು ನೀಡಿದನು:

> ಸರಳವಾದ ಕಾರಣವನ್ನು ದೇವರ ವಾಕ್ಯದ ಆಧಾರದಿಂದ ಪಡೆಯದ ಹೊರತು ನಾನು ಪೋಪನ ಹಾಗೂ ಅವರ ಮಂಡಳಿಯನ್ನು ಒಪ್ಪಲಾರೆ, ಯಾಕೆಂದರೆ ಅವರ ನಡುವೆಯೋ ಅನೇಕ ವ್ಯತ್ಯಾಸಗಳು ಇರುತ್ತವೆ - ನನ್ನ ಮನಸ್ಸಾಕ್ಷಿಯು ದೇವರ ವಾಕ್ಯಕ್ಕೆ ವಶವಾಗಿದೆ. ಮನಸ್ಸಾಕ್ಷಿಗೆ ವಿರುದ್ಧವಾಗಿ ನಾನು ಏನನ್ನು ಎಂದಿಗೂ ಮಾಡಲಾರೆ, ಯಾಕೆಂದರೆ ಅದು ಸುರಕ್ಷಿತವಲ್ಲ. ದೇವರೇ ಸಹಾಯಿಸು ಆಮೇನ್.[4]

## ಮುಕ್ತಾಯ

ನಿಮ್ಮ ಮನಸ್ಸಾಕ್ಷಿಯು ನಿಮಗೆ ಮಾರ್ಗದರ್ಶನ ನೀಡಬೇಕೆ? ಎಂಬ "ಹೌದು/ಇಲ್ಲ" ಎಂಬ ಪ್ರಶ್ನೆಗೆ ನೀಡಿರುವ ಉತ್ತರವನ್ನು ನೀವುಗಳು ಅರ್ಥಮಾಡಿಕೊಂಡಿರುವಿರಿ ಎಂದು ನಾನು ನಿರೀಕ್ಷಿಸಿದ್ದೇನೆ. ಧಾರ್ಮಿಕ ವಿಚಾರಗಳಲ್ಲಿ, ಮನಸ್ಸಾಕ್ಷಿಯು ಮಾತ್ರ ನಮಗೆ ಮಾರ್ಗದರ್ಶನ ನೀಡಬಾರದು. ಇನ್ನೊಂದೆಡೆ, ದೇವರು ನೀಡಿರುವ ಈ ಸುರಕ್ಷತೆಯ ಮನಸ್ಸಾಕ್ಷಿಯನ್ನು ಅಸಡ್ಡೆ ಮಾಡಬಾರದು. ನಾವು ಯಾವಾಗಲೂ ಈ ಮನಸ್ಸಾಕ್ಷಿಯನ್ನು ತಿದ್ದುತ್ತಿರಬೇಕು, ಅದು ಸರಿಯಾಗಿರುವದನ್ನು ಹಾಗೂ ತಪ್ಪಾಗಿರುವದನ್ನು ಗ್ರಹಿಸಲಿಕ್ಕೆ ಶಕ್ತವಾಗಿರಬೇಕು.[5]

ದೇವರು ಬಯಸುವಂಥ ಮನಸ್ಸಾಕ್ಷಿಯು ಪರಿಣಾಮಕಾರಿಯಾಗಿರುತ್ತದೆ. ಪ್ರಕಾಶಮಾನ ವಾಗಿರುತ್ತದೆ, ಹಾಗೂ ಅದನ್ನು ಅಭ್ಯಾಸಮಾಡಿಕೊಳ್ಳಬೇಕು. ನಮ್ಮ ಮೊದಲನೆಯ ಪಾಠದಲ್ಲಿ, ನಾವು ಪರಿಣಾಮಕಾರಿಯಾದ ಮನಸ್ಸಾಕ್ಷಿಯನ್ನು ಹೊಂದಬೇಕೆಂಬ ಅಂಶವನ್ನು ನೋಡಿ ದ್ದೇವೆ; ಈಗಿನ ಪಾಠದಲ್ಲಿ ಪ್ರಕಾಶಮಾನವಾದ ಮನಸ್ಸಾಕ್ಷಿಯ ಕುರಿತು ಕಲಿತ್ತಿದ್ದೇವೆ; ಮುಂದಿನ ಪಾಠದಲ್ಲಿ, ಮನಸ್ಸಾಕ್ಷಿಯನ್ನು ಹಾಗೆ ಅಭ್ಯಾಸಕ್ಕೆ ಒಳಪಡಿಸಬೇಕು ಎಂದು ನೋಡಲಿದ್ದೇವೆ.

ಅಂತಿಮವಾಗಿ 1 ಪೇತ್ರ 3:21ನ್ನು ಗಮನಿಸೋಣ. ಈ ವಾಕ್ಯಭಾಗದಲ್ಲಿ, ಪೇತ್ರನು, "ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ

ನಮ್ಮನ್ನು ರಕ್ಷಿಸುತ್ತದೆ. ಅದು ಮೈಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ. ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳು ವಂಥದೇ" ಒಳ್ಳೇ ಮನಸ್ಸಾಕ್ಷಿಗಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು ಎಂಬುದು ಇನ್ನೊಂದು ಅರ್ಥವಾಗಿದೆ.

ನೀನು ಯೇಸುವಿನಲ್ಲಿ ವಿಶ್ವಾಸವಿಡಬೇಕೆಂದು ದೇವರ ವಾಕ್ಯ ತಿಳಿಸುತ್ತದೆ (ಯೋಹಾನ 3:16), ಪಾಪಗಳಿಗಾಗಿ ಮಾನಸಾಂತರಪಡಿರಿ (ಅಪೊಸ್ತಲರ ಕೃತ್ಯಗಳು 17:30), ಹೃದಯದಲ್ಲಿರುವ ನಂಬಿಕೆಯನ್ನು ಅರಿಕೆ ಮಾಡಿರಿ (ರೋಮಾಪುರ 10:9, 10), ಪಾಪಗಳಿಗಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ (ಮುಳುಗುವ ದೀಕ್ಷಾಸ್ನಾನ) (ಅಪೊಸ್ತಲರ ಕೃತ್ಯಗಳು 2:38), ನಂತರ ಮರಣವು ಬರುವವರೆಗೆ ನಂಬಿಗಸ್ತರಾಗಿರಿ (ಪ್ರಕಟನೆ 2:10). ನಿಮ್ಮ ಮನಸ್ಸಾಕ್ಷಿಯು ಪ್ರಕಾಶಮಾನವಾಗಿದ್ದರೆ, ಈ ಬೋಧನೆಗಳು ಸತ್ಯವಾದವು ಎಂದು ಒಪ್ಪಿಕೊಳ್ಳುತ್ತದೆ. ನಿಮ್ಮ ಮನಸ್ಸಾಕ್ಷಿಯು ಪರಿಣಾಮಕಾರಿಯಾಗಿದ್ದರೆ, ಈ ಸಂಗತಿಗಳನ್ನು ನೀನು ಪಾಲಿಸಲು ಅದು ಅನುವು ಮಾಡಿಕೊಡುತ್ತದೆ. ನೀನು ಮಾಡಬೇಕಾದದ್ದನ್ನು, ಮಾಡಲೇ ಬೇಕೆಂದು ನಿನ್ನ ಮನಸ್ಸಾಕ್ಷಿಗೆ ಅಭ್ಯಾಸಮಾಡಿಸಬೇಕು. ಈಗಲೇ ನಿನ್ನ ಮನಸ್ಸಾಕ್ಷಿಯು ದೇವರಲ್ಲಿ "ಹೌದು" ಎಂದು ಹೇಳಲಿ - ಅದನ್ನು ಈಗಲೇ ಮಾಡು!

---

ಟಿಪ್ಪಣೆಗಳು

[1]ಈ ಉದಾಹರಣೆಗಳು A. G. Hobbs, Jr., ಎಂಬುವರು ತಾನು ಬರೆದ ಕರಪತ್ರವಾದ "Is Conscience a Safe Guide?" ಎಂಬುದರಲ್ಲಿ ಸೂಚಿಸಿದ್ದಾರೆ. (Fort Worth, Tex.: By the Author, n.d.), 1-5. ಈ ಉದಾಹರಣೆಗಳು ಸಾಮಾನ್ಯವಾದವು. ವೈಯಕ್ತಿಕವಾದ ಹಲವು ಮನಸ್ಸಾಕ್ಷಿಗೆ ಸಂಬಂಧಪಟ್ಟ ಉದಾಹರಣೆಗಳನ್ನು ಇದಕ್ಕೆ ಸೇರಿಸಬಹುದು. [2]"ಬಲ" ಅಂದರೆ ಎಲ್ಲಾ ವಿಚಾರಗಳಲ್ಲಿ ಜ್ಞಾನಯುಕ್ತ ಎಂಬ ಅರ್ಥವಲ್ಲ, ಕೆಲವು ವಿಚಾರಗಳಲ್ಲಿ ಮಾತ್ರ. ಒಂದು ವಿಚಾರದಲ್ಲಿ (ಬಲವಾದ) ಮನಸ್ಸಾಕ್ಷಿ, ಇತರೆ ವಿಚಾರದಲ್ಲಿ ಬಲಹೀನವಾದ (ಅಲಕ್ಷದ) ಮನಸ್ಸಾಕ್ಷಿ. ರೋಮಾಪುರ 14; 15ರಲ್ಲಿ, ಎರಡು ವಿಷಯಗಳ ನಿದರ್ಶನವನ್ನು ನೀಡಲಾಗಿದೆ: ವಿಗ್ರಹಗಳಿಗೆ ಅರ್ಪಿಸಿದ ಮಾಂಸವನ್ನು ಬುಜಿಸುವ ವಿಚಾರದಲ್ಲಿ ಯೆಹೂದ್ಯರು ಬಲವಾದ ಮನಸ್ಸಾಕ್ಷಿಯನ್ನು ಹೊಂದಿದ್ದರು, ವಿಶೇಷ ಹಬ್ಬದ ದಿನಗಳ ವಿಚಾರದಲ್ಲಿ ಬಲಹೀನವಾಗಿದ್ದರು. ಅದಕ್ಕೆ ತದ್ವಿರುದ್ಧವಾಗಿ ಅನ್ಯರು ವಿಗ್ರಹಗಳಿಗೆ ಅರ್ಪಿಸಿದ ಮಾಂಸವನ್ನು ಬುಜಿಸುವ ವಿಚಾರದಲ್ಲಿ ಬಲಹೀನರಾಗಿದ್ದರು, ವಿಶೇಷ ವಾದ ಯೆಹೂದ್ಯರ ಹಬ್ಬದ ದಿನಗಳನ್ನು ಆಚರಿಸುವಲ್ಲಿ ಭಲವುಳ್ಳವರಾಗಿದ್ದರು. [3]ಕೆಲವು ಕ್ರಿಯೆಗಳು ತಪ್ಪಾಗಿರುತ್ತವೆ. ಇದು ಇತರರಿಗೆ ತಪ್ಪಾಗಿ ಕಾಣಬಹುದು. [4]Roland H. Bainton, *Here I Stand: A Life of Martin Luther* (Nashville, Tenn.: Abingdon Press, 1950; Mentor Books, 1955), 144. [5]ಈ ಪಾಠದ ಮುಖ್ಯ ಸೂತ್ರಗಳಲ್ಲಿ ಪುನಃ ವಿವರಿಸಲು ಸಮಯವನ್ನು ತೆಗೆದುಕೊಳ್ಳಿ.